ಕವಿವಿಯಿಂದ ಅರಿವೇ ಗುರು ಹೆಸರಲ್ಲಿ ರಾಜ್ಯಮಟ್ಟದ ಪ್ರಶಸ್ತಿ

ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯವು ಪ್ರಪ್ರಥಮ ಬಾರಿಗೆ 'ಅರಿವೇ ಗುರು' ಎಂಬ ಹೆಸರಿನಲ್ಲಿ ರಾಜ್ಯಮಟ್ಟದ ಪ್ರಶಸ್ತಿ ನೀಡಲು ಮುಂದಾಗಿದ್ದು ಈ ಕುರಿತು ಕಳೆದ ಅ. 12ರಂದು ಕುಲಪತಿ ಪ್ರೊ. ಕೆ.ಬಿ. ಗುಡಸಿ ಅವರು ಸಭೆ ನಡೆಸಿ ಪ್ರಶಸ್ತಿ ನೀಡಲು ತೀರ್ಮಾನಿಸಿದ್ದಾರೆ. ಕರ್ನಾಟಕ ರಾಜ್ಯೋತ್ಸವ ದಿನದಂದೇ 'ಅರಿವೇ ಗುರು' ಹೆಸರಿನಲ್ಲಿ ಕಲೆ, ಸಮಾಜ ವಿಜ್ಞಾನ ಹಾಗೂ ವಿಜ್ಞಾನ ಕ್ಷೇತ್ರಗಳಲ್ಲಿ ವಿಶೇಷ ಸಾಧನೆ ಮಾಡಿದ ಮೂವರು ಸಾಧಕರಿಗೆ ರಾಜ್ಯಮಟ್ಟದ ಈ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ. ಪ್ರಶಸ್ತಿಯು ತಲಾ ₹ 25,000 ನಗದು ಬಹುಮಾನ ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿದೆ. ಪ್ರಶಸ್ತಿಗಳ ಪಾರದರ್ಶಕ ಆಯ್ಕೆಗಾಗಿ ಉನ್ನತ ಮಟ್ಟದ ಶೋಧನಾ ಸಮಿತಿ ರಚಿಸಲಾಗಿದೆ. ಪ್ರಶಸ್ತಿ ನೀಡುವ ಈ ಪ್ರಕ್ರಿಯೆಯು ಪ್ರತಿವರ್ಷ ಮುಂದುವರಿಯುವುದೆಂದು ಕವಿವಿ ಕುಲಸಚಿವ ಯಶಪಾಲ್ ಕ್ಷೀರಸಾಗರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುಸ್ಲಿಂರೊಂದಿಗೆ ವ್ಯಾಪಾರ ನಿಲ್ಲಿಸಿ

'ಹಲಾಲ್ ಜಿಹಾದ್?' ಗ್ರಂಥ ಲೋಕಾರ್ಪಣೆಯಲ್ಲಿ ಮುತಾಲಿಕ್ ಕರೆ

• ಕನ್ನಡಪ್ರಭ ವಾರ್ತೆ ಹುಬ್ಬಳ್ಳಿ

ವ್ಯಾಪಾರಕ್ಷೇತ್ರದಲ್ಲಿ ಹಿಂದೂ ಸಮಾಜ ಸಾಕಷ್ಟು ಜಾಗೃತಿಯಾಗಬೇಕು. ನಮ್ಮ ಸಂಸ್ಕೃತಿ, ಸಂಪ್ರದಾಯ ಉಳಿಸುವ ನಿಟ್ಟಿನಲ್ಲಿ ಮುಸ್ಲಿಂರೊಂದಿಗೆ ವ್ಯಾಪಾರ, ವ್ಯವಹಾರ ಸಂಪೂರ್ಣ ನಿಲ್ಲಿಸಿ ಎಂದು ಶ್ರೀರಾಮಸೇನೆ ಮುಖ್ಯಸ್ಥ ಪ್ರಮೋದ ಮುತಾಲಿಕ್ ಹೇಳಿದರು.

ಇಲ್ಲಿನ ಆರ್.ಎನ್. ಶೆಟ್ಟಿ ಕಲ್ಯಾಣ ಮಂಟಪದ ಸಭಾಭವನದಲ್ಲಿ ಹಿಂದೂ ಜನಜಾಗೃತಿ ಸಮಿತಿ ವತಿಯಿಂದ ಶನಿವಾರ ಸಂಜೆ ನಡೆದ 'ಹಲಾಲ್‌ಜಿಹಾದ್?'ಗ್ರಂಥದಲೋಕಾರ್ಪಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಪರಂಪರೆ ಮುಂದುವರಿಸುತ್ತಿರುವ ಕಲಾಲ ಸಮುದಾಯ ತನ್ನ ಹಿಂದಿನ ಇತಿಹಾಸವನ್ನು ಅರಿತು ವ್ಯಾಪಾರ ಧರ್ಮ ಅಳವಡಿಸಿಕೊಳ್ಳಬೇಕು. ಹಲಾಲ್ ಎಂಬುದು ದೊಡ್ಡ ಗಂಡಾಂತರವಾಗಿದೆ. ಸರ್ಕಾರದ ಹಣ ಅಭಿವೃದ್ಧಿಗೆ ಹೋಗುತ್ತಿದ್ದರೆ, ಹಲಾಲ್‌ನ ಹಣ ಅಪಾಯಕಾರಿಯಾಗಿರುವ ದೇಶದ್ರೋಹಿ ಕೃತ್ಯ, ಮುಸ್ಲಿಂ ಗೂಂಡಾಗಳಿಗೆ ಉಪಯೋಗವಾಗುತ್ತಿದೆ ಎಂದು ದೂರಿದರು. ಹಿಂದೂಗಳ ಹೋರಾಟದ ಲಾಭವನ್ನು ಒಂದು ಪಕ್ಷ ಪಡೆಯುತ್ತಿದೆ. ದೇಶದಲ್ಲಿ ಶೇ. 20ರಷ್ಟು ಇರುವ ಮುಸ್ಲಿಮರು ಹಲಾಲ್ ಪರವಾಗಿದ್ದಾರೆ. ಉಳಿದಂತೆ ಹಿಂದೂಗಳು ಯಾಕೆ ಹಲಾಲ್‌ನ್ನು ವಿರೋಧಿಸುತ್ತಿಲ್ಲ. ನಮ್ಮಲ್ಲಿ ಏಕೆ ಸ್ವಾಭಿಮಾನದ ಜ್ವಾಲೆ ಕಾಣುತ್ತಿಲ್ಲ ಎಂದು ಪ್ರಶ್ನಿಸಿದರು.

ಹಿಂದೂ ಜನಜಾಗೃತಿ ಸಮಿತಿ ರಾಷ್ಟ್ರೀಯ ವಕ್ತಾರ ರಮೇಶ ಶಿಂಧೆ ಮಾತನಾಡಿ, ಹಲಾಲ್ ಇಸ್ಲಾಂ ಕಲ್ಪನೆಯಾಗಿದೆ. ಅದನ್ನು ಎಲ್ಲದರ ಮೇಲೂ ಹೇರಲಾಗುತ್ತಿದೆ. ಇಂದು ಹಲಾಲ್ ಬಹುದೊಡ್ಡ ಆರ್ಥಿಕತೆಯಾಗಿ ಬೆಳೆದಿದೆ. ಯುರೋಪ್‌ನ 7 ರಾಷ್ಟ್ರಗಳಲ್ಲಿ ಹಲಾಲ್ ಬ್ಯಾನ್ ಮಾಡಲಾಗಿದೆ. ಆದರೆ ನಮ್ಮಲ್ಲಿ ಮಾತ್ರ ಇದು ಏಕೆ ಸಾಧ್ಯವಾಗಿಲ್ಲ ಎಂದು ಪ್ರಶ್ನಿಸಿದ ಅವರು, ಎಲ್ಲ ವ್ಯಾಪಾರ, ಶೇರು ಮಾರುಕಟ್ಟೆ, ಆಸ್ಪತ್ರೆ, ಪ್ರವಾಸೋದ್ಯಮ ಹಾಗೂ ಹಲವು ಕ್ಷೇತ್ರಗಳಲ್ಲಿ ಹಲಾಲ್ ಕಾಲಿಟ್ಟಿದೆ. ಹಲಾಲ್ ಮುಕ್ತ ಭಾರತ ನಿರ್ಮಾಣದ ಅಗತ್ಯವಿದೆ ಎಂದು ಪ್ರತಿಪಾದಿಸಿದರು.

ಸರ್ಕಾರದ ಅನುಮತಿ ಇಲ್ಲದೆ ಖಾಸಗಿಯಾಗಿ ನಡೆಯುತ್ತಿರುವ ಹಲಾಲ್ ಪೌಲ್ಟ್ರಿ ಉದ್ಯಮವನ್ನು ಸಂಪೂರ್ಣ ನಿಯಂತ್ರಣಕ್ಕೆ ತೆಗೆದುಕೊಂಡಿದೆ. ದೇಶದಲ್ಲಿ 4 ಸಂಸ್ಥೆಗಳು ಹಲಾಲ್ ಸರ್ಟಿಫಿಕೇಟ್ ನೀಡುತ್ತಿದ್ದು, ಸರ್ಕಾರಕ್ಕಿಂತಲೂ ಆರ್ಥಿಕವಾಗಿ ಬೆಳೆದಿವೆ. ಹಲಾಲ್ ವಿರುದ್ಧ ಅಭಿಯಾನ ನಡೆಸಿದ್ದರಿಂದಲೇ ಮಂಗಳೂರಿನಲ್ಲಿ ಬಿಜೆಪಿ ಕಾರ್ಯಕರ್ತ ಪ್ರವೀಣ ನೆಟ್ಟಾರು ಹತ್ಯೆಯಾಗಿದೆ ಎಂದು ಹೇಳಿದರು.

ಹೈಕೋರ್ಟ್ ವಕೀಲ ನಾರಾಯಣ ಯಾಜಿ ಮಾತನಾಡಿ, ಹಲಾಲ್ ಹಾಗೂ ಸೆಕ್ಯುಲರಿಸ್ಂ ಒಂದೇ ನಾಣ್ಯದ ಎರಡು ಮುಖಗಳಾಗಿವೆ. ಹಲಾಲ್ ಪರ ಮಾತನಾಡಿದರೆ ಬುದ್ಧಿಜೀವಿ, ವಿಚಾರವಾದಿ, ವಿರೋಧವಾಗಿ ಮಾತನಾಡಿದರೆ ಕೋಮುವಾದಿ ಎನ್ನಲಾಗುತ್ತಿದೆ. ಅದರ ಅನಾಹುತ ಅರಿತು ಜನರಲ್ಲಿ ಜಾಗೃತಿ ಮೂಡಿಸುವುದು ಅಗತ್ಯವಾಗಿದೆ ಎಂದರು.

ಹಲಾಲ್ ಹಲವು ಕ್ಷೇತ್ರಗಳಲ್ಲಿ ವ್ಯಾಪಿಸಿರುವ ಕುರಿತು ಸಾಕ್ಷ್ಯಚಿತ್ರ ಪ್ರದರ್ಶನ ಮಾಡಲಾಯಿತು. ಸಮಿತಿ ಸಮನ್ವಯಕ ಗುರುಪ್ರಸಾದ ಗೌಡ, ಕಲಾಲ ಸಮಾಜದ ಮುಖಂಡ ರಮೇಶ ಮಂಡಳಕರ, ಎಪಿಎಂಸಿ ಮಾಜಿ ಸದಸ್ಯ ಚೆನ್ನು ಹೊಸಮನಿ ಮತ್ತಿತರರಿದ್ದರು.

KP



ಕಾರ್ಯಕ್ರಮದಲ್ಲಿ 'ಹಲಾಲ್ ಜಿಹಾದ್?' ಗ್ರಂಥವನ್ನು ಲೋಕಾರ್ಪಣೆಗೊಳಿಸಲಾಯಿತು.

- ದೇಶದಲ್ಲಿ ಶೇ. 20ರಷ್ಟು ಇರುವ ಮುಸ್ಲಿಮರು ಹಲಾಲ್ ಪರವಾಗಿದ್ದಾರೆ. ಉಳಿದಂತೆ ಹಿಂದೂಗಳು ಯಾಕೆ ಹಲಾಲ್‌ನ್ನು ವಿರೋಧಿಸುತ್ತಿಲ್ಲ. ನಮ್ಮಲ್ಲಿ ಏಕೆ ಸ್ವಾಭಿಮಾನದ ಜ್ವಾಲೆ ಕಾಣುತ್ತಿಲ್ಲ

ಆಡಳಿತದಲ್ಲಿ ಆಮೂಲಾಗ್ರ ಬದಲಾವಣೆಗೆ ಡಿಸಿ ನಡೆ ಹಳ್ಳಿ ಕಡೆ

• ಕನ್ನಡಪ್ರಭ ವಾರ್ತೆ ಧಾರವಾಡ

ಸರ್ಕಾರದ ಯೋಜನೆಗಳನ್ನು ಜನರ ಮನೆ ಬಾಗಿಲಿಗೆ ತಲುಪಿಸುವ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿಕಡೆ' ಕಾರ್ಯಕ್ರಮ ಜಿಲ್ಲೆಯ ಆಡಳಿತವ್ಯವಸ್ಥೆಯಲ್ಲಿ ಸಾಕಷ್ಟು ಬದಲಾವಣೆ ಮತ್ತು ಪ್ರಾಮಾಣಿಕ ಅಧಿಕಾರಿಗಳ ಜನಪ್ರಿಯತೆಯನ್ನು ಹೆಚ್ಚಿಸಿದೆ. ಸಾರ್ವಜನಿಕರಿಗೆ ಇದರಿಂದ ಹೆಚ್ಚು ಅನುಕೂಲವಾಗಿದೆ ಎಂದು ಶಾಸಕ ಅಮೃತ ದೇಸಾಯಿ ಹೇಳಿದರು.

ತಾಲೂಕಿನ ಹಾರೋಬೆಳವಡಿ ಗ್ರಾಮದ ವೀರಭದ್ರೇಶ್ವರ ದೇವಸ್ಥಾನದಲ್ಲಿ ಜಿಲ್ಲಾಡಳಿತ ಆಯೋಜಿಸಿದ್ದ ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ ಕಾರ್ಯಕ್ರಮ ಉದ್ಘಾಟಿಸಿದ ಅವರು, ವಿವಿಧ ಕಾರಣಕ್ಕೆ ಬಾಕಿ ಉಳಿದಿರುವ ಸಾರ್ವಜನಿಕರ ಮಾಸಾಶನ, ವಿಧವಾ ವೇತನ ಸೇರಿದಂತೆ ವಿವಿಧ ಪಿಂಚಣಿ ಸೌಲಭ್ಯಗಳನ್ನು ಪಡೆಯಲು ಇದು ಅನುಕೂಲವಾಗಲಿದೆ. ಅಧಿಕಾರಿಗಳು ವಿಳಂಬ ಮಾಡದೇ, ಪ್ರತಿಯೊಬ್ಬ ಗ್ರಾಮಸ್ಥರ ಸಮಸ್ಯೆಯನ್ನು ಪರಿಹರಿಸುವ ಕೆಲಸ ಮಾಡಬೇಕು ಎಂದರು.

ರಾಜ್ಯ ಸರ್ಕಾರದ ಪ್ರಮಾಣಿಕ ಪ್ರಯತ್ನದಿಂದಾಗಿ ಸಾರ್ವಜನಿಕರ ಮನೆ ಬಾಗಿಲಿಗೆ ಅಧಿಕಾರಿಗಳು ಬಂದು ಅವರ ಸೌವಲತ್ತು ವಿತರಿಸಿ, ಅಹವಾಲು ಆಲಿಸಿ ಪರಿಹರಿಸುವ ಕಾರ್ಯ ನಿರಂತರವಾಗಿ ಜಿಲ್ಲೆಯಲ್ಲಿ ನಡೆದಿದೆ. ಒಬ್ಬ ಸಾಮಾನ್ಯ ರೈತ, ಗ್ರಾಮವಾಸಿ ತನ್ನ ಆಸ್ತಿ ದಾಖಲೆ ಅಥವಾ ಅಗತ್ಯ ಕಾಗದ ಪತ್ರಗಳನ್ನು ಪಡೆಯಲು ಸರ್ಕಾರಿ ಕಚೇರಿಗಳಿಗೆ ಅಲೆಯಬೇಕಾಗಿತ್ತು ಮತ್ತು ಅನಿವಾರ್ಯವಾಗಿ ಮಧ್ಯವರ್ತಿಗಳ ಮೊರೆಹೊಗಬೇಕಾಗಿತ್ತು. ಈಗ ಅಧಿಕಾರಿಗಳು ಜನಸ್ನೇಹಿಯಾಗಿ ಸೇವೆ ಮಾಡುತ್ತಿದ್ದು, ತಹಸೀಲ್ದಾರ್ ಹಾಗೂ ಜಿಲ್ಲಾಧಿಕಾರಿಗಳು ಕೆಳಸಿಬ್ಬಂದಿಗಳ ಮೇಲೆ ನಿರಂತರ ನಿಗಾವಹಿಸುತ್ತಿದ್ದಾರೆ ಎಂದರು.

ಅಧ್ಯಕ್ಷತೆ ವಹಿಸಿದ್ದ ತಹಶಿಸೀಲ್ದಾರ್ ಸಂತೋಷ ಹಿರೇಮಠ ಮಾತನಾಡಿ, ಜನಸಾಮಾನ್ಯರ ದೂರು, ಅಹವಾಲುಗಳನ್ನು ಸ್ಥಳದಲ್ಲಿಯೆ ಸ್ವೀಕರಿಸಿ, ಪರಿಹರಿಸಲು ಆದ್ಯತೆ ನೀಡಲಾಗಿದೆ. ಈ ಕಾರ್ಯಕ್ರಮದಿಂದ ಆಡಳಿತದ ಬಗ್ಗೆ ಇದ್ದ ಜನಾಭಿಪ್ರಾಯ ಬದಲಾಗಿದ್ದು, ಜನಪರ ಯೋಜನೆಗಳನ್ನು ಪಾರದರ್ಶಕವಾಗಿ ಅರ್ಹರಿಗೆ ತಲುಪಿಸುವಲ್ಲಿ ಇದು ಪರಿಣಾಮಕಾರಿ ಪಾತ್ರವನ್ನು ನಿರ್ವಹಿಸುತ್ತಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಾಮಾಜಿಕ ಭದ್ರತಾ ಯೋಜನೆ ಅಡಿಯಲ್ಲಿ ಅರ್ಹ ಫಲನುಭವಿಗಳಿಗೆ ಮಾಸಾಶನ ಪ್ರಮಾಣ ಪತ್ರ ಹಾಗೂ ಸುಕನ್ಯಾ ಸಮೃದ್ಧಿ ಯೋಜನೆಯ ಪಾಸ್‌ಬುಕ್‌ಗಳನ್ನು ಶಾಸಕರು ಫಲಾನುಭವಿಗಳಿಗೆ ವಿತರಿಸಿದರು. ಕರ್ನಾಟಕ ಬಯಲು ಸೀಮೆ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ತವನಪ್ಪ ಅಷ್ಟಗಿ, ತಾಲೂಕು ಆರೋಗ್ಯ ಅಧಿಕಾರಿ ಡಾ. ಕೆ.ಎನ್. ತನುಜಾ, ವಿವಿಧ ಇಲಾಖೆಗಳ ಅಧಿಕಾರಿಗಳಿದ್ದರು.

KP

ಹಾರೋಬೆಳವಡಿಯಲ್ಲಿ ಶಾಸಕ ಅಮೃತ ದೇಸಾಯಿ ಅವರೊಂದಿಗೆ ಗ್ರಾಮಸ್ಥರು.

ಎರಡು ತಲೆ ಹಾವು ಮಾರಾಟ: ಮೂವರ ಬಂಧನ

ಹುಬ್ಬಳ್ಳಿ: ಎರಡು ತಲೆ ಹಾವು ಮಾರಾಟ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಬಂಧಿಸುವಲ್ಲಿ ಬೆಂಡಿಗೇರಿ ಠಾಣೆ ಪೊಲೀಸರು ಯಶಸ್ವಿಯಾಗಿದ್ದು, ಬಂಧಿತರಿಂದ ಕಾರು ವಶಪಡಿಸಿಕೊಂಡಿದ್ದಾರೆ. ನಗರದ ಹೊರವಲಯದ ಗಬ್ಬೂರು ಬೈಪಾಸ್ ಬಳಿ ಎರಡು ತಲೆಯ ಹಾವನ್ನು ಮಾರಾಟ ಮಾಡಲು ಆರೋಪಿಗಳು ಬಂದಿದ್ದರು. ಖಚಿತ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿದ ಪೊಲೀಸರು ಆರೋಪಿಗಳನ್ನು ಬಂಧಿಸಿ ಹಾವನ್ನು ವಶಕ್ಕೆ ಪಡೆದಿದ್ದಾರೆ. ಬಂಧಿತರು ರಾಯಚೂರು ಮೂಲದವರಾಗಿದ್ದಾರೆ. ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಈ ಕುರಿತು ಬೆಂಡಿಗೇರಿ ಪೊಲೀಸ್ ಠಾಣೆಯಲ್ಲಿ ಅರಣ್ಯ ಸಂರಕ್ಷಣೆ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಇಂದು ವೈದ್ಯಕೀಯ ಕಾರ್ಯಾಗಾರ-ರಾಜ್ಯಮಟ್ಟದ ಸಮ್ಮೇಳನ

• ಕನ್ನಡಪ್ರಭ ವಾರ್ತೆ ಹುಬ್ಬಳ್ಳಿ

ಕರ್ನಾಟಕ ರುಮಟಾಲಜಿ ಅಸೋಸಿಯೇಷನ್ ವತಿಯಿಂದ ಅ. 16ರಂದು ನಗರದ ಖಾಸಗಿ ಹೋಟೆಲ್‌ನಲ್ಲಿ ವೈದ್ಯಕೀಯ ಕಾರ್ಯಾಗಾರ ಹಾಗೂ ರಾಜ್ಯಮಟ್ಟದ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ ಎಂದು ಅಸೋಸಿಯೇಷನ್‌ನ ಕಾರ್ಯದರ್ಶಿ ಡಾ. ನಾಗರಾಜ ಎಸ್. ಹೇಳಿದರು. ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಗ್ಗೆ 10ಕ್ಕೆ ಸಮ್ಮೇಳನದ ಉದ್ಘಾಟನೆ ಕಾರ್ಯಕ್ರಮ ನಡೆಯಲಿದೆ. ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಡಾ. ನಿರಂಜನಕುಮಾರ, ಡಾ. ಕೆ.ಎಂ. ಮಹೇಂದ್ರನಾಥ, ಡಾ. ಚಂದ್ರಶೇಖರ ಎಸ್., ಡಾ. ವಿನೀತಾ ಶೋಭಾ, ಡಾ.ಧರ್ಮಾನಂದ ಪಾಲ್ಗೊಳ್ಳುವರು ಎಂದರು. ಸುದ್ದಿಗೋಷ್ಠಿಯಲ್ಲಿ ಆನಂದ ಪಟ್ಟೇದ, ಡಾ. ಶಿವಪ್ರಸಾದ ಬಿ.ಎನ್., ಡಾ. ಪ್ರಮೋದ ಥಬ್ಬಿ, ವಿಕ್ರಮ ಹರಿದಾಸ, ವಿನೀತಾ ಶೋಭಾ ಇದ್ದರು.

ಸಾರ್ವಜನಿಕ ನೋಟಿಸು

ಧಾರವಾಡ ಜಿಲ್ಲಾ ಹುಬ್ಬಳ್ಳಿ ತಾಲೂಕು ಸಬ್ ರಜಿಸ್ಟ್ರಾರ್ ಹದ್ದಿಯ ಪೈಕಿ ಹುಬ್ಬಳ್ಳಿ ಶಹರದ ಕೃಷ್ಣಾಪುರ ಗ್ರಾಮದ ಹದ್ದಿಯಲ್ಲಿರುವ ಬಿನ್ ಶೇತ್ಕಿ ಪ್ಲಾಟ ಇದರ ಸಿಟಿ ಸರ್ವೆ ನಂ. 4917ಬಿ/191, ಕ್ಷೇತ್ರ 66.6/9 ಚದರ ಯಾರ್ಡ ಇದ್ದು, ಸದರಿ ಆಸ್ತಿಯು ಶ್ರೀಮತಿ ನಂದಾ ಕೋಂ ಚಿದಂಬರ ತೋರಗಲ್ ಇವರ ಮಾಲ್ಕಿ ವ ಕಬ್ಜಾ ವಹಿವಾಟಿಯಲ್ಲಿರುತ್ತದೆ. ಸದರ ಮಾಲೀಕರಿಂದ ನಮ್ಮ ಪಕ್ಷಗಾರರಾದ ಕಸ್ತೂರಿ ಎಚ್. ಸುಣದಾಳ ಇವರು ಸದರಿ ಮೇಲ್ಕಾಣಿಸಿದ ಪ್ಲಾಟನ್ನು ಖರೀದಿ ಮಾಡಿಕೊಳ್ಳುವವರಿರುತ್ತಾರೆ. ಸದರ ಜಮೀನಿನ ಮೇಲೆ ಯಾರಿಗಾದರೂ ಹಕ್ಕು ಹಿತಾಸಕ್ತಿ ಇದ್ದಲ್ಲಿ ಅಥವಾ ಯಾರಿಗಾದರೂ ತಂಟೆ, ತಕರಾರು, ಬೋಜಾ ವ ಆಕ್ಷೇಪಣೆಗಳಿದ್ದಲ್ಲಿ ಈ ನೋಟಿಸು ಪ್ರಕಟವಾದ (ಏಳು) 07 ದಿನಗಳ ಒಳಗಾಗಿ ಈ ಕೆಳಗೆ ವಿವರಿಸಿದ ವಿಳಾಸಕ್ಕೆ ಲೇಖಿ ಮುಖಾಂತರ ಆಧಾರ ಸಹಿತವಾಗಿ ತಿಳಿಸತಕ್ಕದ್ದು. ಆ ನಂತರ ಬಂದ ತಕರಾರುಗಳನ್ನು ಪರಿಗಣಿಸದೇ ನಮ್ಮ ಪಕ್ಷಗಾರರು ಸದರ ಮೇಲ್ಕಂಡ ಜಮೀನನ್ನು ಖರೀದಿಸಿ ತಮ್ಮ ಹೆಸರಿಗೆ ಖರೀದಿ ಪತ್ರವನ್ನು ನೋಂದಾಯಿಸಿಕೊಳ್ಳುವವರಿರುತ್ತಾರೆ ಅಂತಾ ಕೊಟ್ಟ ಸಾರ್ವಜನಿಕ ನೋಟಿಸು.

ಸಹಿ/- **ಮಾನಸಾ ಹೆಗಡೆ,** ವಕೀಲರು
#19, ಆರೋಗ್ಯ ಮೆಡಿಕಲ್ಸ್ ಮೇಲ್ಗಡೆ, ಹೊಸೂರ-ಉಣಕಲ್
ಬೈಪಾಸ್ ರಸ್ತೆ, ಹುಬ್ಬಳ್ಳಿ. ಮೊ. ನಂ. 9148718602
ಹುಬ್ಬಳ್ಳಿ ದಿನಾಂಕ : 15-10-2022

ಸಾರ್ವಜನಿಕ ನೋಟಿಸು

ಶ್ರೀಮತಿ ನಂದಾ ಕೋಂ ಚಿದಂಬರ ತೋರಗಲ, ಸಾಕೀನ: ಹುಬ್ಬಳ್ಳಿ, ಇವರು ಕೊಟ್ಟ ಮಾಹಿತಿ ವ ಅಧಿಕಾರದ ಮೇರೆಗೆ ಕೊಡುವ ಸಾರ್ವಜನಿಕ ನೋಟಿಸು ಏನೆಂದರೆ, ಧಾರವಾಡ ಜಿಲ್ಲಾ ಹುಬ್ಬಳ್ಳಿ ತಾಲೂಕು ಸಬ್ ರಜಿಸ್ಟ್ರಾರ್ ಹದ್ದಿಯ ಪೈಕಿ ಹುಬ್ಬಳ್ಳಿ ಶಹರದ ಕೃಷ್ಣಾಪುರ ಗ್ರಾಮದ ಹದ್ದಿಯಲ್ಲಿರುವ ಬಿನ್ ಶೇತ್ಕಿ ಪ್ಲಾಟ, ಇದರ ಸಿಟಿ ಸರ್ವೆ ನಂ.4917ಬಿ/191, ಕ್ಷೇತ್ರ 66.6/9 ಚದರ ಯಾರ್ಡ ಇದ್ದು, ಸದರಿ ಆಸ್ತಿಯು ನಮ್ಮ ಪಕ್ಷಗಾರರ ವಹಾಲ್ಕಿ ವ ಕಬ್ಜಾ ವಹಿವಾಟಿಯಲ್ಲಿರುತ್ತದೆ. ಸದರಿ ಮೇಲ್ಕಾಣಿಸಿದ ಆಸ್ತಿಗೆ ಸಂಬಂಧಪಟ್ಟ ಈ ಕೆಳಗೆ ಕಾಣಿಸಿದ ಅಸಲ/ಓರಿಜಿನಲ್ ಖರೀದಿ ಪತ್ರವನ್ನು ನಮ್ಮ ಪಕ್ಷಗಾರರು ನಜರಚೂಕಿನಿಂದ ಕಳೆದುಕೊಂಡಿರುತ್ತಾರೆ. ನಮ್ಮ ಪಕ್ಷಗಾರರು ಕಳೆದುಕೊಂಡ ಅಸಲ/ಓರಿಜಿನಲ್ ಖರೀದಿ ಪತ್ರಗಳ ವಿವರ: ಖರೀದಿ ಪತ್ರ ದಸ್ತಾವೇಜ ನಂ. 7369, ದಿ: 26-02-2001. ಸದರಿ ಮೇಲ್ಕಾಣಿಸಿದ ಅಸಲ/ಓರಿಜಿನಲ್ ಖರೀದಿ ಪತ್ರವನ್ನು ಯಾವುದೇ ಬ್ಯಾಂಕ್ ವ ಸಂಘ ಸಂಸ್ಥೆಗಳಲ್ಲಿ ಅಡವಾಗಿಟ್ಟಿರುವುದಿಲ್ಲ ಹಾಗೂ ಎಷ್ಟೆ ಹುಡುಕಿದರೂ ಸಿಕ್ಕಿರುವುದಿಲ್ಲ. ಒಂದು ವೇಳೆ ಸದರಿ ಅಸಲ/ಓರಿಜಿನಲ್ ಖರೀದಿ ಪತ್ರವು ಯಾರಿಗಾದರೂ ಸಿಕ್ಕಿದ್ದಲ್ಲಿ ಈ ಕೆಳಗೆ ಕಾಣಿಸಿದ ವಿಳಾಸಕ್ಕೆ ಈ ನೋಟಿಸ ಪ್ರಕಟವಾದ 07 ದಿನಗಳ ಒಳಗಾಗಿ ಸಲ್ಲಿಸಬೇಕು ಅಂತಾ ಕೊಟ್ಟ ಸಾರ್ವಜನಿಕ ನೋಟಿಸು.

ಸಹಿ/- **ಮಾನಸಾ ಹೆಗಡೆ,** ವಕೀಲರು
#19, ಆರೋಗ್ಯ ಮೆಡಿಕಲ್ಸ್ ಮೇಲ್ಗಡೆ, ಹೊಸೂರ-ಉಣಕಲ್
ಬೈಪಾಸ್ ರಸ್ತೆ, ಹುಬ್ಬಳ್ಳಿ. ಮೊ. ನಂ. 9148718602
ಹುಬ್ಬಳ್ಳಿ ದಿನಾಂಕ : 15-10-2022

ಸ್ಪೆಷಲ್!
ಕನ್ನಡಪ್ರಭ
ಪ್ರತಿ ಶನಿವಾರ
ಖುಷಿ

ICICI Home Finance

ಕಾರ್ಪೊರೇಟ್ ಕಛೇರಿ: ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ ಐಸಿಐಸಿಐ ಎಚ್‌ಎಫ್‌ಸಿ ಟವರ್, ಅಂಧೇರಿ -ಕುರ್ಲಾ ರಸ್ತೆ, ಅಂಧೇರಿ (ಪೂರ್ವ), ಮುಂಬೈ - 400059, ಇಂಡಿಯಾ.
ಶಾಖಾ ಕಛೇರಿ: 1ನೇ ಮಹಡಿ, ಸಂ. 159/20, ಸುಧಾ ಕಾಂಪ್ಲೆಕ್ಸ್, ಅಟ್ಲಾಸ್ ರಸ್ತೆ, ಸುಭಾಷ್ ಚೌಕ್ ಹತ್ತಿರ, ಸೋನಿಪತ್- 131001.
ಶಾಖಾ ಕಛೇರಿ: 2ನೇ ಮಹಡಿ, ಆರ್‌ಡಿ ಬಡ್ಡಿ ಮ್ಯಾನ್ಷನ್, ಕೋಟಕ್ ಬ್ಯಾಂಕ್ ಮೇಲೆ, ಧಾರವಾಡ ಹುಬ್ಬಳ್ಳಿ 123, ಡಿ ಕ್ಲಬ್ ರಸ್ತೆ, ಹುಬ್ಬಳ್ಳಿ - 580029.

[ನಿಯಮ 8(6)ಕ್ಕೆ ಪ್ರೊವಿಸೊಗಳನ್ನು ನೋಡಿರಿ]

ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಸೂಚನೆ

2002ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 8(6)ಕ್ಕೆ ಪ್ರಾವಿಸೋಗಳ ಜೊತೆ ಓದಿಕೊಳ್ಳಬೇಕಾದ 2002ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಹಿತಾಸಕ್ತಿ ಜಾರಿ ಕಾಯಿದೆಯಡಿ ಸ್ಥಿರ ಆಸ್ತಿ ಮಾರಾಟಕ್ಕಾಗಿ ಇ-ಹರಾಜು ಮಾರಾಟ ಸೂಚನೆ.

ಸಾಲಗಾರ(ರಿ)ನಿಗೆ ಮತ್ತು ಜಾಮೀನುದಾರ(ರಿ)ನಿಗೆ ನಿರ್ದಿಷ್ಟವಾಗಿ ಹಾಗೂ ಸಾರ್ವಜನಿಕವಾಗಿ ವಿಸ್ತಾರವಾಗಿ ಸೂಚನೆ ನೀಡುವುದೇನೆಂದರೆ ಭದ್ರತಾ ಸಾಲಗಾರರು ಬ್ಯಾಂಕಿಗೆ ಸ್ವಾಧೀನಕ್ಕಾಗಿ ಅಡಮಾನಿತ/ಸುಪರ್ದಿಗೆ ನೀಡಿರುವ ಕೆಳಕಂಡಂತೆ ವಿವರಿಸಲಾದ ಆಸ್ತಿಗಳನ್ನು ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿ., ಬ್ಯಾಂಕ್‌ನ ಅಧಿಕೃತ ಅಧಿಕಾರಿಗಳು ಭೌತಿಕ ಸ್ವಾಧೀನಪಡಿಸಿಕೊಂಡಿದ್ದು ಇವುಗಳನ್ನು ''ಎಲ್ಲಿ ಹೇಗಿದೆಯೋ ಹಾಗೆಯೇ'', ''ಎಲ್ಲಿ ಏನಿದೆಯೋ ಹಾಗೆಯೇ'', ಮತ್ತು ''ಎಲ್ಲಿ ಏನೇನಿದೆಯೋ ಆಧಾರದಲ್ಲಿ'' ಮಾರಾಟ ಮಾಡಲಿದ್ದಾರೆ. ಸಂಕ್ಷಿಪ್ತ ವಿವರಣೆಗಳನ್ನು ಕೆಳಕಂಡಂತೆ ನೀಡಲಾಗಿದೆ.

ಕ್ರ. ಸಂ	ಸಾಲಗಾರನ(ರು)ಗಳ/ ಸಹ ಸಾಲಗಾರನ(ರ)/ ಜಾಮೀನುದಾರನ(ರ)ಹೆಸರು ಸಾಲದ ಖಾತಾ ಸಂ.	ಭದ್ರತಾ ಆಸ್ತಿಯ ವಿವರಗಳು ತಿಳಿದಿರುವ ಋಣ ಬಾಧ್ಯತೆಗಳೊಂದಿಗೆ ಏನಾದರೂ ಇದ್ದಲ್ಲಿ	ಬಾಕಿ ಯಾಗಿರುವ ಮೊತ್ತ	ಮೀಸಲು ಬೆಲೆ ಅರ್ನೆಸ್ಟ್ ಹಣ ಠೇವಣಿ	ಆಸ್ತಿಯ ಪರಿಶೀಲಿಸ ಬಹುದಾದ ದಿನಾಂಕ ಮತ್ತು ಸಮಯ	ಹರಾಜಿನ ದಿನಾಂಕ ಹಾಗೂ ಸಮಯ
ಎ	(ಬಿ)	(ಸಿ)	(ಡಿ)	(ಇ)	(ಎಫ್)	(ಜಿ)
1	ವಿಶ್ವನಾಥ್ ದಿಲೀಪ ಕುಮಾರ ಜೋಶಿ (ಸಾಲಗಾರ) ಅರ್ಚನ ವಿಶ್ವನಾಥ್ ಜೋಶಿ (ಸಹ-ಸಾಲ ಗಾರ) ಸಾಲದ ಖಾತಾ ಸಂ. NHDWD00001024162	ಪ್ಲಾಟ್ ನಂ.20, ಆರ್.ಎಸ್ ನಂ.151, ಶ್ರೀ ಸಮರ್ಥ ಕುಟಿರ್ ಲೇಔಟ್, KHB ಲೇಔಟ್ ಪಕ್ಕ, ಗಾಮನಗಟ್ಟಿ ಗ್ರಾಮ, ನವನಗರ ಹುಬ್ಬಳ್ಳಿ-580025	ರೂ. 14,02,916/- 6 ಅಕ್ಟೋಬರ್ 2022 ರಂದು ಇದ್ದಂತೆ	ರೂ. 10,59,480/- ರೂ. 1,05,948/-	21 ಅಕ್ಟೋಬರ್ 2022 ಬೆಳಗ್ಗೆ 11.00 ರಿಂದ ಮಧ್ಯಾಹ್ನ 03.00	31 ಅಕ್ಟೋಬರ್ 2022 ಮಧ್ಯಾಹ್ನ 02.00 ರಿಂದ ಮಧ್ಯಾಹ್ನ 03.00
2	ವಿಠಲ ಚಂದ್ರಪ್ಪ ಬಡಿಗರ್ (ಸಾಲಗಾರ) ಬಡಿಗೇರಿ ಚಂದ್ರಪ್ಪ (ಸಹ-ಸಾಲಗಾರ) ಸಾಲದ ಖಾತಾ ಸಂ. LHHBL00000824143	ಸೈಟ್ ಸಂಖ್ಯೆ 1265-LIG, ಸರ್ವೆ ನಂ 46/3, KHB ಕಾಲೋನಿ, ಸತ್ತೂರು 2 ನೇ ಹಂತ, ಸತ್ತೂರು ಗ್ರಾಮ ಧಾರವಾಡ ಜಿಲ್ಲೆ, ಧಾರವಾಡ ತಾಲ್ಲೂಕು, ಧಾರವಾಡ.	ರೂ. 4,19,728/- 6 ಅಕ್ಟೋಬರ್ 2022 ರಂದು ಇದ್ದಂತೆ	ರೂ. 9,33,120/- ರೂ. 93,312/-	21 ಅಕ್ಟೋಬರ್ 2022 ಬೆಳಗ್ಗೆ 11.00 ರಿಂದ ಮಧ್ಯಾಹ್ನ 03.00	31 ಅಕ್ಟೋಬರ್ 2022 ಮಧ್ಯಾಹ್ನ 02.00 ರಿಂದ ಮಧ್ಯಾಹ್ನ 03.00
3	ದ್ಯಾವಪ್ಪ ವಾಲಿಕರ್ (ಸಾಲಗಾರ) ಪ್ರೇಮ ವಾಲಿಕರ್ (ಸಹ-ಸಾಲಗಾರ) ಸಾಲದ ಖಾತಾ ಸಂ. NHDWD00001276185	ಪ್ಲಾಟ್ ಸಂ. 33, ಆರ್‌ಎಸ್ ಸಂ. 154, ವಿಂಟೇಜ್ ಪಾರ್ಕ್ ಬಡಾವಣೆ, ಹಿರೇಮಲ್ಲಿಗೆವಾಡ್ ಗ್ರಾಮ, ಹುಬ್ಬಳ್ಳಿ- 580001.	ರೂ. 13,74,746/- 6 ಅಕ್ಟೋಬರ್ 2022 ರಂದು ಇದ್ದಂತೆ	ರೂ. 12,49,560/- ರೂ. 1,24,956/-	21 ಅಕ್ಟೋಬರ್ 2022 ಬೆಳಗ್ಗೆ 11.00 ರಿಂದ ಮಧ್ಯಾಹ್ನ 03.00	31 ಅಕ್ಟೋಬರ್ 2022 ಮಧ್ಯಾಹ್ನ 02.00 ರಿಂದ ಮಧ್ಯಾಹ್ನ 03.00

ಮೇಲೆ ವಿವರಿಸಲಾದ ಭದ್ರತಾ ಆಸ್ತಿಗಳ ಹರಾಜು ಮಾರಾಟವು ಹರಾಜಿನ ಏಜೆನ್ಸಿಯವರಾದ ಆ್ಯಕ್ಷನ್ ಟೈಗರ್ ಮೂಲಕ (URL Link-https://sarfaesi.auctiontiger.net/EPROC/) ಎಂಬುದರ ಮೇಲೆ ನಡೆಯುತ್ತದೆ. ಅಡಮಾನದಾರರಿಗೆ/ ನೋಟೀಸರವರಿಗೆ ಅವರ ಒಟ್ಟು ಬಾಕಿ ಸಾಲ ಮತ್ತು ತದನಂತರದ ಬಡ್ಡಿಯನ್ನು ಹರಾಜಿನ ದಿನಾಂಕ **28ನೇ ಅಕ್ಟೋಬರ್, 2022ರ ಸಾಯಂಕಾಲ 5.00ರೊಳಗಾಗಿ** ಮರುಪಾವತಿ ಮಾಡಲು ಕೊನೆಯ ಅವಕಾಶ ನೀಡಲಾಗಿದೆ ಇಲ್ಲವಾದಲ್ಲಿ ಈ ಭದ್ರತಾ ಆಸ್ತಿಯನ್ನು(ಗಳನ್ನು) ಕಾರ್ಯಸೂಚಿಯಂತೆ ಮಾರಾಟ ಮಾಡಲಾಗುತ್ತದೆ.

ಭಾವಿ ಬಿಡ್‌ದಾರ(ರು) ಮೇಲೆ ತಿಳಿಸಿದ ಅರ್ನೆಸ್ಟ್ ಹಣ ಠೇವಣಿ (ಇಎಂಡಿ)ಆರ್‌ಟಿಜಿಎಸ್/ ಡಿಮಾಂಡ್ ಡ್ರಾಫ್ಟ್(ಡಿಡಿ) (ಕಾಲಂ ಸಂಖ್ಯೆ ಎಫ್‌ರಲ್ಲಿ ನಮೂದಿಸಿದಂತೆ) ಯೊಂದಿಗೆ ತಮ್ಮ ಆಫರ್‌ಗಳನ್ನು ಮೊಹರಾದ ಲಕೋಟೆಯಲ್ಲಿಟ್ಟು ಭದ್ರತಾ ಆಸ್ತಿ ಖರೀದಿಗಾಗಿ ಆಫರ್ ಎಂಬ ಮೇಲ್ಬರಹ ಮಾಡಿ ಐಸಿಐಸಿಐ ಬ್ಯಾಂಕ್ ಲಿಮಿಟೆಡ್, **2 ನೇ ಮಹಡಿ, ಆರ್.ಡಿ ಬಡ್ಡಿ ಮ್ಯಾನ್ಷನ್, ಕೋಟಕ್ ಬ್ಯಾಂಕ್ ಮೇಲೆ, ಧಾರವಾಡ ಹುಬ್ಬಳ್ಳಿ 123, ಡಿ ಕ್ಲಬ್ ರಸ್ತೆ, ಹುಬ್ಬಳ್ಳಿ - 580029** ಇವರಿಗೆ **28ನೇ ಅಕ್ಟೋಬರ್, 2022 ಸಂಜೆ 04.00** ಗಂಟೆಯೊಳಗಾಗಿ ಅಥವಾ ಮುಂಚಿತವಾಗಿ ಸಲ್ಲಿಸಬೇಕು. ಇಎಂಡಿಗಾಗಿನ ಡಿಡಿ/ ಪಿಓ ಯಾವುದೇ ರಾಷ್ಟ್ರೀಕೃತ/ ಷೆಡ್ಯೂಲ್ ಬ್ಯಾಂಕಿನಿಂದ ''ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್'', **2 ನೇ ಮಹಡಿ, ಆರ್.ಡಿ ಬಡ್ಡಿ ಮ್ಯಾನ್ಷನ್, ಕೋಟಕ್ ಬ್ಯಾಂಕ್ ಮೇಲೆ, ಧಾರವಾಡ ಹುಬ್ಬಳ್ಳಿ 123,** ರವರ ಪದನಾಮಕ್ಕೆ **28ನೇ ಅಕ್ಟೋಬರ್, 2022 ಸಂಜೆ 05.00** ಗಂಟೆಯೊಳಗಾಗಿ ಪಾವತಿಯಾಗುವಂತಿರಬೇಕು. ಅರ್ನೆಸ್ಟ್ ಮನಿ ಡೆಪಾಸಿಟ್ ಡಿಮ್ಯಾಂಡ್ ಡ್ರಾಫ್ಟ್ (ಡಿಡಿ) ರಾಷ್ಟ್ರೀಕೃತ/ಶೆಡ್ಯೂಲ್ಡ್ ಬ್ಯಾಂಕ್‌ನಿಂದ ''ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್'' ಪರವಾಗಿರಬೇಕು. ಹರಾಜು **ಹುಬ್ಬಳ್ಳಿಯಲ್ಲಿ** ಪಾವತಿಸಬೇಕು.

ಪರಿಶೀಲನೆ, ಹರಾಜಿನ ಷರತ್ತು ಮತ್ತು ನಿಬಂಧನೆಗಳು ಅಥವಾ ಟೆಂಡರ್ ಸಲ್ಲಿಕೆಗಾಗಿನ ಇತರೆ ಯಾವುದೇ ಸ್ಪಷ್ಟನೆಗಳಿಗಾಗಿ ದಯವಿಟ್ಟು **ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್‌ನ ಮೊಬೈಲ್ ಸಂ.7021072869.**

ಅಧಿಕೃತ ಅಧಿಕಾರಿಯು ಯಾವುದೇ ಬಿಡ್‌ಗಳನ್ನು ಯಾವುದೇ ಅಥವಾ ಎಲ್ಲ ಬಿಡ್‌ಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸಬಹುದಾದ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾರೆ.

ಮಾರಾಟದ ವಿವರವಾದ ಷರತ್ತು ಮತ್ತು ನಿಬಂಧನೆಗಳಿಗಾಗಿ ದಯಮಾಡಿ ಐಸಿಐಸಿಐ ವೆಬ್‌ಸೈಟ್‌ಗೆ **https://www.icicihfc.com/** ಭೇಟಿ ಮಾಡಿ.

ದಿನಾಂಕ: ಅಕ್ಟೋಬರ್ 16, 2022 — ಅಧಿಕೃತ ಅಧಿಕಾರಿ,
ಸ್ಥಳ: ಹುಬ್ಬಳ್ಳಿ — **ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್**

ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಚಿಕ್ಕೋಡಿ

Tel.No.:08338-275101 E-Mail: ee.rdws.ckd@gmail.com

ನಂ. ಕಾ.ಇಂ/ಗ್ರಾಕು.ನೀ&ನೈ/ವಿಚಿ/ತಾಂಶಾ:ಕಡತ್ಟು1&2:ಟೆಂಡರ್:2022-23/57/2075 ದಿನಾಂಕ: 13-10-2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ KW-3 (ಸ್ಟ್ಯಾಂಡರ್ಡ ಟೆಂಡರ್ ಡಾಕ್ಯುಮೆಂಟ್) ನಿಯಮಾನುಸಾರ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಕಾಯ್ದೆಗಳಲ್ಲಿಯ ನಿಯಮಗಳು ಹಾಗೂ ಸರಕಾರದ ಇತ್ತೀಚಿಗಿ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಚಿಕ್ಕೋಡಿ ವ್ಯಾಪ್ತಿಯಲ್ಲಿ ಈ ಕೆಳಗೆ ನಮೂದಿಸಿರುವ ಸರಬರಾಜು ಯೋಜನೆ ಕಾಮಗಾರಿಗಳಿಗೆ ಇ- ಪ್ರೊಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗಿದೆ.

Work Indent No:-
45901,45900,45893,45892,45889,45888,45886,45885,45457,45455,45454,45453,45452,45451,45449,45448,45447,44864.

ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಇ-ಪ್ರೊಕ್ಯೂರ್‌ಮೆಂಟ್ ಪ್ರೊಟಾಲ್ (Viz, http: // eproc.karnataka.Gov.in) ನಲ್ಲಿ ಸಂಪರ್ಕಿಸಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.

1) ಟೆಂಡರ ಪೂರ್ವಭಾವಿ ಸಭೆ:- 18-10-2022 ಕಾರ್ಯನಿರ್ವಾಹಕ ಅಭಿಯಂತರರು ಗ್ರಾ ಕು ನೀ & ನೈ ವಿಭಾಗ ಚಿಕ್ಕೋಡಿ ಕಚೇರಿಯಲ್ಲಿ
2) ಇ-ಪ್ರೊಕ್ಯೂರಮೆಂಟ್ ಟೆಂಡರಿಂಗ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: 20-10-2022 ಸಾಯಂಕಾಲ 17:00 ಘಂಟೆವರೆಗೆ
3) ಇ-ಪ್ರೊಕ್ಯೂರಮೆಂಟ್ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: 21-10-2022 ಸಂಜೆ 17-30 ಘಂಟೆ ನಂತರ ತೆರೆಯಲಾಗುವುದು.

ಸಹಿ/-
ಕಾರ್ಯನಿರ್ವಾಹಕ ಅಭಿಯಂತರರು,
& ಗ್ರಾ.ಕು.ನೀ.&ನೈ. ವಿಭಾಗ, ಚಿಕ್ಕೋಡಿ.

DIPR/KPBGM/RO.NO.1024/2022-23

ಕಳೆದಿದೆ

ನಮ್ಮ ಪಕ್ಷಗಾರರಾದ, ಶ್ರೀಮತಿ ಶೋಭಾ ಕೋಂ. ಶಂಕ್ರಪ್ಪ ಪ್ಯಾಟಿ ಸಾ: ಧಾರವಾಡ ಇವರು ಕೊಟ್ಟ ಮಾಹಿತಿ ವ ಅಧಿಕಾರದ ಮೇಲಿಂದ ಈ ಮೂಲಕ ಕೊಡುವ ನೋಟೀಸು ಏನೆಂದರೆ:-

ಧಾರವಾಡ ಜಿಲ್ಲಾ, ಧಾರವಾಡ ತಾಲೂಕ ಹದ್ದಿಯ ಪೈಕಿ ದೊಡ್ಡನಾಯಕನಕೊಪ್ಪ ಗ್ರಾಮದಲ್ಲಿ ಬರುವ ಬಿನ್‌ಶೇತ್ಕಿ ಖುಲ್ಲಾ ಜಾಗೆ ಇದರ ಸರ್ವೆ ನಂ. 52 ಬ/1ಅ1ಡ, ಪ್ಲಾಟ್ ನಂ. 51 ಕ್ಷೇತ್ರ 01 ಗುಂಟೆ 05.50 ಆಣೆ, ಇದರ ಮಾಲೀಕರಿದ್ದು ಇದರ ಮೂಲ ಖರೀದಿ ಕಾಗದ ದಸ್ತಾವೇಜ ನಂ. 688 ದಿ. 11/06/1990 ಮತ್ತು ಡಿಡಬ್ಲ್ಯುಆರ್-1-06140/2011-12 ದಿ: 02-11-2011 ಖರೀದಿ ಕಾಗದ ಪತ್ರಗಳು ದಿ.08/10/2022 ರಂದು ಧಾರವಾಡ ಹೈಕೋರ್ಟಿನಿಂದ ನಗರ ಕಡೆಗೆ ಬಸ್ಸಿನಲ್ಲಿ ಹೋಗುವಾಗ ನಜರಚೂಕಿನಿಂದ ಕಳೆದಿರುತ್ತದೆ. ಆ ಪ್ರಯುಕ್ತ ಧಾರವಾಡ ಸಬ್-ಅರ್ಬನ್ ಪೋಲಿಸ್ ಠಾಣಾದಲ್ಲಿ ದಿ. 12/10/2022 ರಂದು ದೂರನ್ನು ದಾಖಲಿಸಿದ್ದು ಇರುತ್ತದೆ. ಕಾರಣ ಅದು ಯಾರಿಗಾದರೂ ಸಿಕ್ಕಲ್ಲಿ ಈ ಪತ್ರಿಕಾ ಪ್ರಕಟಣೆಯಿಂದ 7 ದಿನಗಳ ಒಳಗಾಗಿ ಈ ಕೆಳಗಿನ ವಿಳಾಸಕ್ಕೆ ತಲುಪಿಸಬೇಕು.

ಎಸ್. ಆರ್. ಸಾಲಿಮನಿ ವಕೀಲರು
ಎಸ್-1, ಲಾ ಛೇಂಬರ್,
ಜಿಲ್ಲಾ ನ್ಯಾಯಾಲಯ ಆವರಣ,
ಧಾರವಾಡ. ಧಾರವಾಡ.
ದಿ.15/10/2022 ಮೋ:9742509779

CRIMINAL MISC NO. 51/2022

IN THE COURT OF THE HON'BLE III ADDL. SENIOR CIVIL JUDGE AND JMFC, HUBBALI AT HUBBALI DHARWAD AT: DHARWAD

Petitioner: Shri Manjunath S/o Basavaraj @ Basappa Chandaragi

V/S

Respondents: The Registrar, Birth and Death Section, Zonal No.4, HDMC, Navanagar, Hubballi

CITATION U/O V RULE 20 OF CPC

Whereas the petitioner have field this petition for entering the name of deceased uncle by name IRAPPA S/O NEELAPPA CHANDARAGI who died on 03-04-2021 at Amargol Village, Tq: Hubballi Dist: Dharwad, the matter is fixed for hearing on **17-11-2022** at 10.30 a.m. So you are all hereby called upon to be present on the said date of hearing personally or through your counsel failing which the matter will be heard and decided in your absence, take notice.

Given under my hand and the seal of the court this 14 day of October 2022.

Hubballi — By order of the court
01-10-2022 — **Shirastedar**
Senior Civil Judge & JMFC, Hubballi

S.M. KURI
Advocate for Petitioner

ಕ್ರಿಮಿನಲ್ ಮಿಸಲೇನಿಯಸ್ ನಂ 127/2022

ಮಾನ್ಯ 2ನೇ ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ ಧಾರವಾಡ ಇವರ ನ್ಯಾಯಾಲಯದಲ್ಲಿ

ಅರ್ಜಿದಾರ: **ಮುಸ್ತಾಕಹ್ಮದ ತಂದೆ ಅಬ್ದುಲರಹಮಾನ ಬೇಗಾಂವಕರ**

-ವಿರುದ್ಧ-

ಎದುರುದಾರರು: **ಮಾ: ಆಯುಕ್ತರು, ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ, ವಲಯ ಕಚೇರಿ ನಂ 02, ಹಳೇ ಪೋಲಿಸ ಹೆಡ್, ಜನನ ವ ಮರಣ ನೋಂದಣಿ ಅಧಿಕಾರಿಗಳು ಧಾರವಾಡ ತಾಲೂಕ ಧಾರವಾಡ**

ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 5 ನಿಯಮ 20 ರಡಿ ನೋಟಿಸು

ಇದರಲ್ಲಿ ಮೇಲ್ಕಾಣಿಸಿದ ಅರ್ಜಿದಾರರು ತಮ್ಮ ಅಜ್ಜನ ಹೆಂಡತಿಯಾದ ಶ್ರೀಮತಿ ಮಾಷಾಬಿ ಕೋಂ ಗೌಸಮೊದ್ದಿನ ಬೇಗಾಂವಕರ ಇವರು ಆಜಾದ ಗಲ್ಲಿ, ಮೇದಾರ ಓಣಿ ರಸ್ತೆ ಧಾರವಾಡದಲ್ಲಿ ದಿನಾಂಕ 23/03/2019 ರಂದು ನಮ್ಮ ಮನೆಯಲ್ಲಿ ಮರಣ ಹೊಂದಿದ್ದರ ಕುರಿತು ಮರಣ ದಿನಾಂಕವನ್ನು ಸಂಬಂಧಪಟ್ಟ ಮರಣ ನೋಂದಣಿ ರಜಿಸ್ಟರದಲ್ಲಿ ದಾಖಲ ಮಾಡಿ ಮರಣ ಪ್ರಮಾಣಪತ್ರ ನೀಡುವಂತೆ ಎದುರುದಾರರಿಗೆ ನಿರ್ದೇಶನ ಕೋರಿ ದಾಖಲ ಮಾಡಿರುತ್ತಾರೆ.

ಸದರ ಮೇಲ್ಕಂಡ ಅರ್ಜಿಯು ವಿಚಾರಣೆ **ದಿನಾಂಕ 18/11/2022** ರಂದು ನಿಗದಿಪಡಿಸಿದ್ದು ಸದರಿ ಅರ್ಜಿಯ ವಸ್ತು ವಿಷಯ ಕುರಿತು ಯಾರಾದರೂ ತಕರಾರು ವ ಆಕ್ಷೇಪಣೆಗಳನ್ನು ಹೊಂದಿದಲ್ಲಿ ಸದರಿ ದಿನಾಂಕದಂದು ಸರಿಯಾಗಿ **ಮುಂಜಾನೆ 10-45 ಗಂಟೆಗೆ** ಮಾನ್ಯ ನ್ಯಾಯಾಲಯದ ಮುಂದೆ ಖುದ್ದಾಗಿ ಅಥವಾ ಅಧಿಕಾರ ಪಡೆದ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು ವ ಆಕ್ಷೇಪಣೆಗಳನ್ನು ದಾಖಲ ಮಾಡತಕ್ಕದ್ದು. ತಪ್ಪಿದಲ್ಲಿ ಪ್ರಕರಣವನ್ನು ನಿರ್ಣಯಿಸಿ ಮುಂದಿನ ಆದೇಶ ಮಾಡಲಾಗುವುದು ತಿಳಿಯಿರಿ.

ಇಂದು ದಿನಾಂಕ 14/10/2022 ರಂದು ನನ್ನ ಸಹಿ ಹಾಗೂ ನ್ಯಾಯಾಲಯದ ಮೊಹರಿನೊಂದಿಗೆ ಕೊಡಲ್ಪಟ್ಟಿದೆ.

(ಎಮ್. ಎಸ್. ಹಾರಿಹಾಳ) — ನ್ಯಾಯಾಲಯದ ಆದೇಶದ ಮೇರೆಗೆ ಶಿರಸ್ತೇದಾರರು
ಅರ್ಜಿದಾರರ ಪರ ವಕೀಲರು, ಧಾರವಾಡ — 2ನೇ ಅಧಿಕ ದಿವಾಣಿ ವ ಜೆ.ಎಮ್.ಎಫ್.ಸಿ ನ್ಯಾಯಾಲಯ, ಧಾರವಾಡ

SACHIN DHANPAL
SHAHURAJA SINDHE
RUNNING SUCCESSFULLY
ROCKY
ನರ್ತಕಿ
4K 7.1
ಸಿದ್ದೇಶ್ವರ
ಕಾಮಾಕ್ಯ
SHARADA CINEMAS
ವೆಂಕಟೇಶ್ವರ
MUKTA A2 CINEMAS
ವಿನಾಯಕ
ಉಲ್ಲಾಸ್
ಗೋವರ್ಧನ್
ಮೋಹನ್
ಅಶೋಕ
ಗುರುಸಿದ್ದೇಶ್ವರ
Galaxy Paradise
PVR CINEMAS
INOX
Cinépolis
GOPALAN CINEMAS
ROCKLINE mall & cinemas
MAGADI ROAD
SPI AURA
WHITEFIELD
MARATHAHALLI
KINO CINEMAS
ರೂಪ
ಕೃಷ್ಣ
ವಾಣಿ
ಆಕಾಶ್
ನಿರ್ಮಲ
ಸೌಂದರ್ಯಮಹಲ್
ಕೃಷ್ಣ
ಬಾಲಾಜಿ
ಶಾಂತಲ
ಸಪ್ತಗಿರಿ
ಶ್ರೀನಿವಾಸ
ಮಾರುತಿ
ಶ್ರೀನಿವಾಸ
ನಟರಾಜ
ಆದರ್ಶ
ಪ್ರಭ
sahyam CINEMAS
PVR CINEMAS
MVC MYSURU VISION CINEMAS
ಗುರುಶ್ರೀ
ಪೃಥ್ವಿ
ಮಹಾವೀರ
ಕೃಷ್ಣ
ಚನ್ನಾಂಬಿಕಾ
ಬಸವೇಶ್ವರ
ರತ್ನ
ರತ್ನ ಮಹಲ್
ಭಾರ್ಗವಿ
ಶಾರದ
ಸೂರ್ಯ
ಗೌರಿಶಂಕರ
ಬಾಲಾಜಿ
ಲಕ್ಷ್ಮೀ
ಜೈಮಾರುತಿ
ಬಸವೇಶ್ವರ
ಯಜಮಾನ
ರವಿ
ಕಾಳಿಕಾಂಬ
ಸುಮಾ
ಶ್ರೀ ವೀರಭದ್ರೇಶ್ವರ
ಮಂಜುನಾಥ
ವಸಂತ
MOVIE TIME
ಬಸವೇಶ್ವರ
ನಟರಾಜ ಕಾಂಪ್ಲೆಕ್ಸ್
ಮೀರಲಮ್
ಪದ್ಮ
ಪುಷ್ಪಾಂಜಲಿ
ಜಯಶ್ರೀ
ಶಂಕರ್
ಕೊಟ್ರೇಶ್ವರ
ಶ್ರೀನಿವಾಸ
ಭಾಗ್ಯಲಕ್ಷ್ಮೀ
ವಿನಾಯಕ
ವೀರಭದ್ರೇಶ್ವರ
ಸುಧಾ
PVR CINEMAS
Cinépolis
ವಿಜಯ
ಪ್ರಕಾಶ್
ಕಪಿಲ್
INOX
ಡ್ರೀಮ್‌ಲ್ಯಾಂಡ್
ಶಂಕರ್
ಕುಮಾರೇಶ್ವರ
ವೆಂಕಟೇಶ್
ವಿನಾಯಕ
ಮಹಾವೀರ
ಮಹಾವೀರ
ಚಂದನ
CHHOTU MAHARAJ
ನಾರಾಯಣ
ರವಿ
ದುರ್ಗಲಕ್ಷ್ಮೀ
ಸುಭಾಷಿಣಿ
ಆನಂದ್
ಶ್ರೀನಿವಾಸ
ವಸಂತ
ಮಯೂರ
MAGNUM CINEMAS
CHHOTU MAHARAJ
ಸಂಗಮ್
ಸಾಯಿನಾಥ
ದತ್ತ
ವೆಂಕಟೇಶ
ಶಿವಶಕ್ತಿ
ರೇಣುಕಾ
ಸಂಗಮೇಶ್ವರ
ಶ್ರೀನಿವಾಸ
ರಘುವೀರ
ಸಂಗಮ್
INOX
MIRAJ CINEMAS
SHETTY'S
ಪೂರ್ಣಿಮಾ
MIRAJ CINEMAS
ಸ್ವಪ್ನ
ಪೂರ್ಣಿಮಾ
ಮಾರುತಿ
ಶಾರದಾ
ವಿಜಯ
ಸಂಗಮೇಶ್ವರ
ಆನಂದ್
ಭವಾನಿ
ನಂದಿ
ಸಂಗಮೇಶ್ವರ
ಶಿವ ಮಿನಿ
ಲಕ್ಷ್ಮೀ
Bharath Cinemas
ನೇತ್ರಾವತಿ
ನಾಗಲಕ್ಷ್ಮೀ
ಲಕ್ಷ್ಮೀ
ವೆಂಕಟೇಶ್ವರ
ಮಾಲತೇಶ
ರಮಾಕಾಂತಿ
Bharath Cinemas
PVR CINEMAS
Cinépolis
ಕಲ್ಪನ
ರಾಧಿಕಾ
INOX
Cine GALAXY
ಹಾಗೂ ರಾಜ್ಯಾದ್ಯಂತ

ಅತ್ಯಂತ ಪ್ರಭಾವಶಾಲಿ ದಿನಪತ್ರಿಕೆ
ಕನ್ನಡಪ್ರಭ
ಎಲ್ಲರಿಗಿಂತ ಮೊದಲೇ ತಿಳಿಯುವುದು ಇಲ್ಲೇ !
ರಾಜ್ಯ, ದೇಶ, ವಿದೇಶ, ಕ್ರೀಡೆ, ಕೃಷಿ, ಸಿನಿಮಾ ಇನ್ನೂ ಹಲವಾರು...
epaper ಸ್ಪಷ್ಟವಾಗಿ ಓದಿ
epaper.kannadaprabha.in
ಕ್ಷಣ ಕ್ಷಣದ ಸುದ್ದಿಗಾಗಿ ವೀಕ್ಷಿಸಿ
ಸುವರ್ಣ ನ್ಯೂಸ್